# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಕ್ಷಿಣ ವಲಯ

**ಬೈರಸಂದ್ರ , ವಾರ್ಡ ಸಂಖ್ಯೆ: 169**

**ದಿನಾಂಕ:11.03.2022 ರಂದು ವಾರ್ಡ ಸಂಖ್ಯೆ 169 ಬೈರಸಂದ್ರ ವಾರ್ಡನಲ್ಲಿ ನಡೆದ ವಾರ್ಡ ಸಮಿತಿ ಸಭೆ:**

**-: ಸಮಿತಿ ಸಭೆಯ ನಡವಳಿಗಳು :-**

ವಾರ್ಡ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಮತ್ತು ವಾರ್ಡ ಸಮಿತಿ ಸದಸ್ಯರು:-

| ಕ್ರಮ ಸಂಖ್ಯೆ | ಹೆಸರು | ಹುದ್ದೆ |
|---|---|---|
| 01 | ಶ್ರೀ ವಾಲೂ ರಾಥೋಡ್ | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| 02 | ಶ್ರೀ ಚಂದ್ರಶೇಖರ್ ವಿ | ಕಾರ್ಯಾದರ್ಶಿ ಮತ್ತು ಸಂಚಾಲಕರು |
| 03 | ಶ್ರೀ ನರೇಂದ್ರ ಬಾಬು | ಅರಣ್ಯ ಇಲಾಖೆ (ದಕ್ಷಿಣ) , ಬಿ.ಬಿ.ಎಂ.ಪಿ |
| 04 | ಶ್ರೀ ಸುನೀಲ್ ಕುಮಾರ್ ವಿ | ಸಹಾಯಕ ಅಭಿಯಂತರರು, BWSSB |
| 06 | ಕುಮಾರಿ ಪೂನಂ | ಹಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 07 | ಶ್ರೀ ರಮೇಶ್ ವಿ ಬಿ | ಕಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 08 | ಶ್ರೀ ಮೋಹನ್ ರಾವ್. ಇ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘ |
| 09 | ಶ್ರೀ ಶ್ರೀನಿವಾಸನ್ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘ |
| 10 | ಶ್ರೀ ಮಂಜುನಾಥ್ ಜಿ ಎನ್ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘ |
| 11 | ಶ್ರೀ ಪ್ರಕಾಶ್ ಎಂ ಆರ್ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘ |
| 12 | ಶ್ರೀ ಬಾಬು ರಾವ್ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘದ ಅಧ್ಯಕ್ಷರು |

ವಾರ್ಡ ಸಮಿತಿ ಅದ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರುತ್ತಾ , ಸಭೆಯನ್ನು ಪ್ರಾರಂಭಿಸಿದರು.

1. ಮಾನ್ಯ ನೋಡಲ್ ಅಧಿಕಾರಿಗಳು ಮಾತನಾಡುತ್ತಾ 28.02.2022 ರಂದು ತಿಳಿಸಿದ ಸಾರ್ವಜನಿಕರು ಮತ್ತು ನೌಕರರು ತಿಳಿಸಿದ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

2. ವಾರ್ಡ ಸಂಖ್ಯೆ 169 ರಲ್ಲಿರುವ ಅನೇಕ ರಸ್ತೆಗಳು ಹಾಳಾಗಿದ್ದು ಸಾರ್ವಜನಿಕ ಮತ್ತು ವಾಹನ ಸಂಚಾರಕ್ಕೆ ತುಂಬಾ ತೊಂದರೆ ಉಂಟಾಗಿದ್ದು ಕೂಡಲೆ ರಸ್ತೆಗಳಿಗೆ ಡಾಂಬರೀಕರಣ ಮಾಡಲು ಸಭೆಯಲ್ಲಿ ಕೋರಿದರು. **(ಕ್ರಮ: ಕಿ.ಅ, ವಾರ್ಡ 169 ಬೈರಸಂದ್ರ , BBMP)**

3. ಬೈರಸಂದ್ರ ಮುಖ್ಯರಸ್ತೆ , 1ನೇ & 4ನೇ ಮುಖ್ಯರಸ್ತೆ ನಲ್ಲಿರುವ ಅನೇಕ ಮ್ಯಾನ್‌ಹೋಲ್ (Manhole) ಗಳಲ್ಲಿ ಹೊಳು ತುಂಬಿಕೊಂಡಿದ್ದು, ಮ್ಯಾನ್‌ಹೋಲ್‌ಗಳಲ್ಲಿರುವ ಹೂಳುನ್ನು ತೆಗೆಯಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, BWSSB, ಜಯನಗರ)**

Scanned with CamScanner

4. LIC ಕಾಲೋನಿಯ ಕೆಲವು ರಸ್ತೆಗಳಲ್ಲಿ ಬೀದಿ ದೀಪಗಳು ಉರಿಯುತ್ತಿರುವುದಿಲ್ಲ. ಆದುದರಿಂದ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, ವಿದ್ಯುತ್(ದಕ್ಷಿಣ) , ಬಿ.ಬಿ.ಎಂ.ಪಿ ಜಯನಗರ)**

5. 32ನೇ 'ಇ' ಅಡ್ಡರಸ್ತೆ ಮತ್ತು ತಿಲಕ್ ನಗರ ಮುಖ್ಯರಸ್ತೆಯಲ್ಲಿರುವ ಮರಗಳ ರೆಂಬೆಗಳು ಬಾಗಿದ್ದು ಬೀಳುವ ಹಂತದಲ್ಲಿರುತ್ತದೆ. ಆದ್ದರಿಂದ ಮರದ ಕೊಂಬೆಗಳನ್ನು ತೆರವುಗೊಳಿಸಲು ಸಭೆಯಲ್ಲಿ ಕೋರಿದರು. **(ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

6. ವಾರ್ಡ್‌ನಲ್ಲಿ ಬೀದಿನಾಯಿಗಳ ಹಾವಳಿಗಳು ಜಾಸ್ತಿಯಾಗಿದ್ದು, ಸಾರ್ವಜನಿಕರು ರಸ್ತೆಗಳಲ್ಲಿ ಸಂಚರಿಸಲು ತೊಂದರೆಯಾಗುತ್ತಿರುತ್ತದೆ. ಆದುದರಿಂದ ಬೀದಿನಾಯಿಗಳ ಹಾವಳಿಗಳನ್ನು ತಪ್ಪಿಸಲು ಪಶುಸಂಗೋಪನಾ ಇಲಾಖೆಯವರಿಗೆ ತಿಳಿಸಬೇಕೆಂದು ಸಭೆಯಲ್ಲಿ ಕೋರಿದರು. **(ಪಶು ವೈದ್ಯಾಧಿಕಾರಿಗಳು, ಪಶುಸಂಗೋಪನಾ ಇಲಾಖೆ, ಬಿ.ಬಿ.ಎಂ.ಪಿ ಜಯನಗರ)**

7. ಬೈರಸಂದ್ರ ಮುಖ್ಯರಸ್ತೆಯಲ್ಲಿರುವ ಮರಗಳ ರೆಂಬೆಗಳು ಬಾಗಿದ್ದು ಬೀಳುವ ಹಂತದಲ್ಲಿರುತ್ತದೆ. ಆದ್ದರಿಂದ ಮರದ ಕೊಂಬೆಗಳನ್ನು ತೆರವುಗೊಳಿಸಲು ಸಭೆಯಲ್ಲಿ ಕೋರಿದರು. **(ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

**ನಿರ್ಣಯ:** ಈ ವಿಷಯಕ್ಕೆ ಸಮಿತಿಯು ಒಪ್ಪಿಗೆ ತಿಳಿಸಿರುತ್ತಾರೆ. ಕೊನೆಯದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಕಾರ್ಯದರ್ಶಿ ಮತ್ತು ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ ಚಂದ್ರಶೇಖರ್. ವಿ)
ಕಾರ್ಯದರ್ಶಿ ಮತ್ತು ಸಂಚಾಲಕರು
ವಾರ್ಡ್ ಸಮಿತಿ ಸಭೆ
ವಾರ್ಡ್–169, ಬೈರಸಂದ್ರ

Scanned with CamScanner